

بِسۡمِ اللّٰہِ الرَّحۡمٰنِ الرَّحِیۡمِ

# ಧನ ತ್ಯಾಗದ ಮಹತ್ವ, ತಹ್‌ರೀಕ್ ಜದೀದ್ 83ನೇ ವರ್ಷಾರಂಭ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಕೆನಡದ ಕಾಲ್‌ಗರಿಯ ಬೈತುನೂರ್ ಮಸ್ಜಿದ್‌ನಿಂದ **11–11–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಸಾಂಪತ್ತಿಕ ತ್ಯಾಗದ ಬಗ್ಗೆ ಪ್ರಕಾಶ ಬೀರುತ್ತಾ ಹೀಗೆ ಹೇಳಿದರು: "ಮನುಷ್ಯರು ಲೋಕದಲ್ಲಿ ಸಂಪತ್ತನ್ನು ಬಹಳ ಪ್ರೀತಿಸುತ್ತಾರೆ. ಇದೇ ಕಾರಣ ಸ್ವಪ್ನ ವ್ಯಾಖ್ಯಾನ ಗ್ರಂಥಗಳಲ್ಲಿ ಹೀಗೆ ಬರೆದಿದೆ– ಒಬ್ಬನು ಯಕೃತ್ತನ್ನು ತೆಗೆದು ಯಾರಿಗಾದರೂ ಕೊಟ್ಟ ಸ್ವಪ್ನ ಕಂಡರೆ ಅದರ ಅರ್ಥ ಸಂಪತ್ತನ್ನು ಕೊಡುವುದಾಗಿದೆ. ಇದೇ ಕಾರಣದಿಂದ ವಾಸ್ತವಿಕ ಭಯಭಕ್ತಿ ಮತ್ತು ಸತ್ಯವಿಶ್ವಾಸ ಗಳಿಸುವ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ಲನ್ ತನಾಲುಲ್ ಬಿರ್‍ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್.** ನಿಮಗೆ ಪ್ರಿಯವಾದವುಗಳಿಂದ (ದೇವನ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. (3: 93). ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿ ಮತ್ತು ಉತ್ತಮ ವರ್ತನೆಯ ಬಹಳ ದೊಡ್ಡ ಭಾಗ ಅವರಿಗೋಸ್ಕರ ಸಂಪತ್ತನ್ನು ಖರ್ಚು ಮಾಡುವುದಾಗಿದೆ. ಅದರ ಹೊರತು ವಿಶ್ವಾಸ ಪರಿಪೂರ್ಣವೂ ದೃಢವೂ ಆಗಲಾರದು. ಮನುಷ್ಯನು ತ್ಯಾಗ ಮಾಡದಿದ್ದರೆ ಅನ್ಯರಿಗೆ ಲಾಭ ಸಿಗುವುದಾದರೂ ಹೇಗೆ? ಅನ್ಯರಿಗೆ ಲಾಭವುಂಟುಮಾಡಲು ತ್ಯಾಗ ಆವಶ್ಯಕವಾಗಿದೆ. ಪವಿತ್ರ ಖುರ್‌ಆನಿನ ಈ ವಚನದಲ್ಲಿ ತ್ಯಾಗದ ಬಗ್ಗೆ ಮಾರ್ಗದರ್ಶನ ನೀಡಲಾಗಿದೆ. ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮನುಷ್ಯನ ಸಾತ್ವಿಕತೆ ಮತ್ತು ಭಯಭಕ್ತಿಯ ಮಟ್ಟವನ್ನು ಸೂಚಿಸುವಂತಹದ್ದೂ ಅದರ ಪರಿಮಳವೂ ಆಗಿದೆ. ಅಲ್ಲಾಹನ ಪ್ರೀತಿಯನ್ನು ಗಳಿಸಲು ಕಷ್ಟವನ್ನು ನಿರ್ಲಕ್ಷಿಸುವವರು ಅನುಗ್ರಹ ಪಡೆಯುವವರಾಗಿದ್ದಾರೆ. ಏಕೆಂದರೆ ಶಾಶ್ವತ ಸಂತೋಷ ಮತ್ತು ಶಾಶ್ವತ ಸುಖದ ಪ್ರಕಾಶ ಈ ತಾತ್ಕಾಲಿಕ ಕಷ್ಟದ ನಂತರ ಮನುಷ್ಯನಿಗೆ ದೊರಕುತ್ತದೆ."

ಇಂದಿನ ಕಾಲದಲ್ಲಿ ಲೋಕದ ಜನರು ಭಾವಿಸುವುದೇನೆಂದರೆ ಸಂಪತ್ತನ್ನು ಸಂಗ್ರಹಿಸಿ ಅದನ್ನು ಸ್ವಂತ ಸುಖ ಸೌಕರ್ಯಗಳಿಗೋಸ್ಕರ ಖರ್ಚು ಮಾಡುವ ಮೂಲಕ ಸಂತೋಷ ಮತ್ತು ಸಮಾಧಾನ ಗಳಿಸಬಹುದೆಂದಾಗಿದೆ. ಆದರೆ ಧರ್ಮದ ವಾಸ್ತವಿಕ ಜ್ಞಾನಗಳಿಸಿರುವ ಓರ್ವ ಸತ್ಯವಿಶ್ವಾಸಿ ಯೋಚಿಸುವುದು, ನಿಸ್ಸಂಶಯವಾಗಿಯೂ ಅಲ್ಲಾಹನು ಲೌಕಿಕ ಸುಖ ಸೌಲಭ್ಯಗಳನ್ನು ಮನುಷ್ಯನಿಗೋಸ್ಕರ ಸೃಷ್ಟಿಸಿರುವನು; ಆದರೆ ಮನುಷ್ಯನ ಜೀವಿತದ ಮೂಲ ಉದ್ದೇಶ ಅಲ್ಲಾಹನ ಸಂಪ್ರೀತಿ ಗಳಿಸಲು ತಖ್ವವನ್ನು ಹೊಂದುವುದಾಗಿದೆ ಎಂದು. ಅಲ್ಲಾಹನ ಹಕ್ಕುಗಳನ್ನು ಈಡೇರಿಸಿ ಕೊಡಬೇಕು. ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸಬೇಕು. ಅಲ್ಲಾಹನು ಅದರ ಬಗ್ಗೆ ಮೇಲೆ ಉಲ್ಲೇಖಿಸಿದ ವಚನದಲ್ಲಿ ವಿವರಿಸಿದ್ದಾನೆ. ಅದರ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದು, ವಾಸ್ತವಿಕ ನೆಮ್ಮದಿ ಒಳಿತನ್ನು ಮಾಡುವುದರಿಂದ ದೊರಕುತ್ತದೆ, ಸಂಪತ್ತನ್ನು ಶೇಖರಿಸುವುದರಿಂದ ಅದು ಸಿಗಲಾರದು ಎಂದು. ಆದರೆ ಒಳಿತಿನ ಉನ್ನತ ಮಟ್ಟವನ್ನು ತಲಪಬೇಕಾಗಿದ್ದರೆ ನಿಮಗೆ ಪ್ರಿಯಕರವಾದುದನ್ನು ಸೃಷ್ಟಿಗಳ ಸೇವೆಗೋಸ್ಕರ ಖರ್ಚು ಮಾಡುವ ತನಕ ಅದು ಲಭಿಸಲಾರದು.

ಮನುಷ್ಯರು ಸಂಪತ್ತನ್ನು ಅತ್ಯಧಿಕ ಪ್ರೀತಿಸುವುದಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ನಾವು ಇಂದಿನ ಕಾಲದ ಸ್ಥಿತಿಯನ್ನು ಪರಿಶೋಧನೆ ಮಾಡುವುದಾದರೆ, ಲೋಕದ ಗಲಬೆ ಗೊಂದಲಗಳಿಗೆ ಮತ್ತು ಅಸ್ತವ್ಯಸ್ಥತೆಗೆ ಕಾರಣ ಸಂಪತ್ತಿನ ಬಗ್ಗೆ ಮೋಹ ಮತ್ತು ದುರಾಶೆಯಾಗಿವೆ ಎಂದು ತಿಳಿಯುತ್ತದೆ. ಒಬ್ಬ ಲೌಕಿಕ ಮನೋಭಾವದ ಮನುಷ್ಯನು ಬಹಳ ಸಂಪತ್ತು ಗಳಿಸಿದರೆ ಅದನ್ನು ಹೇಗೆ ಖರ್ಚು ಮಾಡುವುದು ಎಂದು ಅವನಿಗೆ ತಿಳಿಯುವುದಿಲ್ಲ. ಅವರು ನಿಸ್ಸಂಶಯವಾಗಿ ಸಂಪತ್ತನ್ನು ಖರ್ಚು ಮಾಡುತ್ತಾರೆ. ಆದರೆ ಅವರು ಸುಖಭೋಗಗಳಿಗೋಸ್ಕರ ಮಾತ್ರ ಖರ್ಚು ಮಾಡುತ್ತಾರೆಯೇ ಹೊರತು ಅವರು ಅಲ್ಲಾಹನ ಸಂಪ್ರೀತಿಗಳಿಸಲು ಮತ್ತು ಒಳಿತುಗಳನ್ನು ಮಾಡಲು ಖರ್ಚು ಮಾಡುವುದಿಲ್ಲ.

ಅಹ್ಮದಿಯರಾದ ನಾವು ನಮ್ಮ ಲೌಕಿಕ ಆವಶ್ಯಕತೆಗಳಿಗೋಸ್ಕರ ಖರ್ಚು ಮಾಡಬೇಕಲ್ಲದೆ ಆಧ್ಯಾತ್ಮಿಕ ಆವಶ್ಯಕತೆಗೋಸ್ಕರ ಸಹ ಖರ್ಚು ಮಾಡಬೇಕಾಗಿದೆ. ಏಕೆಂದರೆ ಧರ್ಮ ಪ್ರಚಾರವನ್ನು ಪೂರ್ಣ ರೂಪದಲ್ಲಿ ನಡೆಸಬೇಕಾದ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸರ್ವ ಮಾನವರಿಗೋಸ್ಕರ ತಂದ ಮಾರ್ಗದರ್ಶನದ ಹರಡುವಿಕೆಯನ್ನು ಪೂರ್ಣಗೊಳಿಸಬೇಕಾದ ಕಾಲ ಇದೇ ಆಗಿದೆ. ಇಂದು ಈ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸುಪರ್ದಿಗೆ ನೀಡಲಾದ ಹಾಗೆಯೇ ಈ ಕೆಲಸವನ್ನು ಅವರನ್ನು ನಂಬುವವರ ಸುಪರ್ದಿಗೆ ಸಹ ನೀಡಲಾಗಿದೆ. ಲೌಕಿಕ ಕಾರ್ಯಗಳ ಮೇಲೆ ಧಾರ್ಮಿಕ ಕಾರ್ಯಗಳಿಗೆ ನಾವು ಆದ್ಯತೆ ನೀಡುವೆವು ಎಂದು ಪ್ರತಿಜ್ಞೆ ಮಾಡಿದವರಿಗೆ ಇದನ್ನು ವಹಿಸಿಕೊಡಲಾಗಿದೆ. ಶ್ರೀಮಂತರು ತಮ್ಮ ಸುಖ ಸಂತೋಷಗಳಿಗೋಸ್ಕರ ಖರ್ಚು ಮಾಡುತ್ತಾರೆ. ಆದರೆ ಸತ್ಯವಿಶ್ವಾಸಿಗಳೊಂದಿಗೆ ಅಲ್ಲಾಹನು ಹೇಳುವುದೇನೆಂದರೆ ವಾಸ್ತವಿಕ ಒಳಿತನ್ನು ಗಳಿಸಲು, ಅಲ್ಲಾಹನ ಸಂಪ್ರೀತಿ ಗಳಿಸಲು ಸತ್ಯವಿಶ್ವಾಸಿ ತನ್ನನ್ನು ಕಷ್ಟಕ್ಕೆ ಗುರಿಪಡಿಸಿ ತಾನು ಪ್ರೀತಿಸುವ ಸಂಪತ್ತಿನಿಂದ ಖರ್ಚು ಮಾಡಬೇಕೆಂದು. ಇಂದಿನ ಕಾಲದಲ್ಲಿ, ಒಂದು ನಿಝಾಮ್‌ಗೆ ಬದ್ಧವಾಗಿ ಖರ್ಚು ಮಾಡುವ ಸತ್ಯವಿಶ್ವಾಸಿಗಳ ಜಮಾಅತ್ ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಅದು ಇಸ್ಲಾಮ್ ಧರ್ಮ ಪ್ರಚಾರಕ್ಕೆ ವಿವಿಧ ರೀತಿಯಲ್ಲಿ ಖರ್ಚು ಮಾಡುತ್ತಿದೆ. ಅಲ್ಲಾಹನ ಸೃಷ್ಟಿಗಳ ಮೇಲೆ ಸಹಾನುಭೂತಿ ಹೊಂದಿ ಅವರಿಗೋಸ್ಕರ ಸಹ ಖರ್ಚು ಮಾಡಲಾಗುತ್ತಿದೆ. ಬಹಳ

ಜನರು ತುಂಬಾ ಕಷ್ಟಪಟ್ಟು ಈ ಖರ್ಚನ್ನು ಮಾಡುತ್ತಾರೆ. ಅವರು ಅಲ್ಲಾಹನ ಸಾಮೀಪ್ಯವನ್ನೂ ಅವನ ಸಂಪ್ರೀತಿಯನ್ನೂ ಗಳಿಸಲಿಕ್ಕೋಸ್ಕರ ಖರ್ಚು ಮಾಡುತ್ತಾರಲ್ಲದೆ ಅವರು ನೀಡುವ ಹಣ ಸರಿಯಾದ ರೀತಿಯಲ್ಲಿ ವಿನಿಯೋಗಿಸಲ್ಪಡುವುದು ಎಂಬ ಸಮಾಧಾನದಿಂದ ಅವರು ಖರ್ಚು ಮಾಡುತ್ತಾರೆ. ಅಹ್ಮದಿಯಾ ಜಮಾಅತಿನ ಸಾಂಪತ್ತಿಕ ವ್ಯವಸ್ಥೆ (ಮಾಲೀ ನಿಝಾಮ್) ಮತ್ತು ಖರ್ಚು ಮಾಡುವ ರೀತಿ ಅತ್ಯುತ್ತಮವೆಂದು ಅನ್ಯರು ಸಹ ಅಂಗೀಕರಿಸದೆ ಇರುವುದಿಲ್ಲ.

ಕಬಾಬೀರ್‌ನಲ್ಲಿರುವ ನಮ್ಮ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಜೆರುಸಲೇಮ್ ವಿಶ್ವ ವಿದ್ಯಾಲಯದ ಇಬ್ಬರು ನಿವೃತ್ತ ಪ್ರೊಫೆಸರ್‌ಗಳು ತಮ್ಮ ಇಬ್ಬರು ವಿದೇಶಿ ಸ್ನೇಹಿತರ ಜೊತೆಗೆ ನಮ್ಮ ಮಿಶನ್ ಹೌಸ್‌ಗೆ ಆಗಮಿಸಿದ್ದರು. ಅವರೊಂದಿಗೆ ಜಮಾಅತಿನ ಬಗ್ಗೆ ಮಾತುಕತೆ ನಡೆಸುವ ಸಂದರ್ಭ ಲಭಿಸಿತು. ಅವರಿಗೆ ಜಮಾಅತಿನ ನಿಝಾಮ್ ಬಗ್ಗೆ ತಿಳಿಸಲಾಯಿತು. ಅವರ ಪೈಕಿ ಒಬ್ಬರು ಆಸ್ಟ್ರೀಯಾದವರಾಗಿದ್ದರು. ಅವರು ಹೇಳಿದರು: ಅಹ್ಮದಿಯಾ ಜಮಾಅತ್‌ಗೆ ಸಂಬಂಧಿಸಿ ನನಗೆ ಅತ್ಯುತ್ತಮವಾದುದೆಂದು ಮನವರಿಕೆಯಾದುದು ಜಮಾಅತಿನ ಸಾಂಪತ್ತಿಕ ವ್ಯವಸ್ಥೆಯಾಗಿದೆ. ಅದು ಅತ್ಯಂತ ಪರಿಶುದ್ಧವಾಗಿದೆ. ಲೋಕದಲ್ಲಿ ಪರಿಶುದ್ಧ ಸಂಪತ್ತಿನ ಮೂಲಕ ಕ್ರಾಂತಿಯನ್ನು ಪ್ರಾಯಶಃ ನಿಮ್ಮ ಮೂಲಕವೇ ನಡೆಸಲಾಗುವುದು ಎಂದು ವಿಧಿಸಲ್ಪಟ್ಟಿದೆ. ಅದಕ್ಕೋಸ್ಕರ ನಿಮಗೆ ಶುಭಾಶಯಗಳು ಎಂದು ಹೇಳಿದರು.

ಚಂದ ಕೊಡುವ ಹಣ ಪರಿಶುದ್ಧವಾಗಿರಬೇಕಾದುದು ಬಹಳ ಆವಶ್ಯಕವಾಗಿದೆ. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ. ನೀವು ಖರ್ಚು ಮಾಡುವ ಹಣ ಪರಿಶುದ್ಧವಾಗಿರಬೇಕು. ಧರ್ಮಬದ್ಧ ರೀತಿಯಲ್ಲಿ ಸಂಪಾದಿಸಿದ್ದಾಗಿರಬೇಕು. ಮೋಸ, ವಂಚನೆಯಿಂದ ಸಂಪಾದಿಸಿದ ಸಂಪತ್ತಾಗಿರಬಾರದು. ಟ್ಯಾಕ್ಸ್ ವಂಚಿಸಿ ಸಂಪಾದಿಸಿದ ಹಣವಾಗಿರಬಾರದು. ಅಥವಾ ಯಾವುದೇ ತಪ್ಪು ರೀತಿಯಲ್ಲಿ ಸಂಪಾದಿಸಿದ ಹಣವಾಗಿರಬಾರದು. ಆ ಲೌಕಿಕ ವ್ಯಕ್ತಿಗೆ ಸಹ ನಮ್ಮ ಜಮಾಅತಿನ ಬಗ್ಗೆ ತಿಳಿಯಿತು– ಕ್ರಾಂತಿ ತರಬಲ್ಲವರು ಇವರೇ ಎಂದು.

ಆದುದರಿಂದ ನಮ್ಮ ಸಂಕಲ್ಪ ಪರಿಶುದ್ಧವಾಗಿರಬೇಕು. ನಾವು ಪರಿಶುದ್ಧ ಸಂಪತ್ತನ್ನು ಗಳಿಸಲು ಪ್ರಯತ್ನಿಸಬೇಕು. ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾ ಇರಬೇಕು. ಆಗ ಖಂಡಿತವಾಗಿಯೂ ನಾವು ಲೋಕದಲ್ಲಿ ಕ್ರಾಂತಿ ಉಂಟುಮಾಡುವ ಮಾರ್ಗವಾಗುವೆವು. ಈ ಕ್ರಾಂತಿ ನಮ್ಮ ಮೂಲಕ ಸಂಭವಿಸುವುದು ವಿಧಿಸಲ್ಪಟ್ಟಿದೆ. ಏಕೆಂದರೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅದರ ವಾಗ್ದಾನ ಮಾಡಿದ್ದಾನೆ. ನಾವು ಲೌಕಿಕವಾದ ಯಾವುದೇ ಕ್ರಾಂತಿ ಉಂಟುಮಾಡುವವರಲ್ಲ. ನಾವು ಮಾಡುವ ಕ್ರಾಂತಿ ಆಧ್ಯಾತ್ಮಿಕವಾದುದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂದೇಶವನ್ನು ಲೋಕಕ್ಕೆ ತಲಪಿಸಬೇಕು. ಏಕದೇವ ವಿಶ್ವಾಸವನ್ನು ಲೋಕದಲ್ಲಿ ಸ್ಥಾಪಿಸಬೇಕಾಗಿದೆ. ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಬೇಕು. ಇವು ಕೇವಲ ಮನುಷ್ಯರ ಮಾತುಗಳಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರೊಂದಿಗೆ ನಿಷ್ಠೆಹೊಂದಿ ಹೃತ್ಪೂರ್ವಕವಾಗಿ ಅವರನ್ನು ಪ್ರೀತಿಸುವವರ ಗುಂಪನ್ನು ವರ್ಧಿಸುವೆನೆಂದು. ಜಮಾಅತ್ ಮಾಡುವ ಸಾಂಪತ್ತಿಕ ತ್ಯಾಗದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನನಗೆ ಚೆನ್ನಾಗಿ ತಿಳಿದಿದೆ, ಕಷ್ಟದ ಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬ ತೋರಿಸಿದಂತಹ ಸತ್ಯ ಮತ್ತು ನಿಷ್ಠೆಯನ್ನು ನಮ್ಮ ಜಮಾಅತಿನ ಜನರು ಸಹ ತೋರಿಸಿದ್ದಾರೆ." ಜಮಾಅತಿನ ಜನರು ಮಾಡುತ್ತಿದ್ದ ಉನ್ನತ ಮಟ್ಟದ ತ್ಯಾಗವನ್ನು ಕಂಡು ಆಶ್ಚರ್ಯಪಡುತ್ತಾ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದರು, ಈ ಜನರು ಇಷ್ಟು ತ್ಯಾಗ ಹೇಗೆ ಮಾಡುತ್ತಿದ್ದಾರೆ ಎಂದು.

ಈ ದಿನ ನಾನು ತಹ್‌ರೀಕ್ ಜದೀದಿನ ಹೊಸ ವರ್ಷದ ಆರಂಭವನ್ನು ಪ್ರಕಟಿಸುತ್ತಿದ್ದೇನೆ. ಆದುದರಿಂದ ಆರ್ಥಿಕ ತ್ಯಾಗ ಮಾಡಿದ ಕೆಲವರ ಬಗ್ಗೆ ಪ್ರಸ್ತಾಪಿಸುವೆನು. ಶ್ರೀಮಂತ ದೇಶಗಳ ಜನರು ಮಾತ್ರವಲ್ಲ ಬಡದೇಶಗಳ ಜನರು ಮತ್ತು ಇತ್ತೀಚೆಗೆ ಬೈಅತ್ ಮಾಡಿದ ಅಹ್ಮದಿಯರು ಸಹ ತ್ಯಾಗ ಮಾಡುತ್ತಿದ್ದಾರೆ. ಅವರ ಹೃದಯಗಳನ್ನು ಅಲ್ಲಾಹನು ಹೇಗೆ ಪರಿವರ್ತಿಸುತ್ತಾನೆಂಬುದು ಆಶ್ಚರ್ಯಕರವಾಗಿದೆ. ಅವರು ಆರ್ಥಿಕವಾಗಿ ಕಷ್ಟದಲ್ಲಿದ್ದರೂ ತ್ಯಾಗಗಳಲ್ಲಿ ಮುಂದೆ ಸಾಗುವವರಾಗಿದ್ದಾರೆ. ಗಿನಿಕನಾಕರಿ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಈ ದೇಶದ ಒಂದು ಜಮಾಅತ್ ಸೋಂಬ್‌ಯಾವಿಯಲ್ಲಿ ಇದೆ. ಅಲ್ಲಿನ ಮಸ್‌ಜಿದಿನ ಇಮಾಮ್ ಮಸ್‌ಜಿದ್‌ನೊಂದಿಗೆ ಈ ವರ್ಷ ಜಮಾಅತ್‌ಗೆ ಸೇರಿದರು. ಅವರೊಂದಿಗೆ ಜಮಾಅತಿನ ಆರ್ಥಿಕ ವ್ಯವಸ್ಥೆ ಮತ್ತು ತಹ್‌ರೀಕ್ ಜದೀದ್ ಬಗ್ಗೆ ವಿವರಿಸಿದಾಗ 'ನಾನು ಚಂದ ಮತ್ತು ಝಕಾತ್ ಬಗ್ಗೆ ಬಹಳ ಹೆಚ್ಚು ಭಾಷಣ ನೀಡಿದ್ದೇನೆ. ಆದರೆ ಇಷ್ಟು ಬಲಿಷ್ಠ ಮತ್ತು ಸಮಗ್ರ ಆರ್ಥಿಕ ವ್ಯವಸ್ಥೆಯನ್ನು ನಾನು ಎಲ್ಲಿಯೂ ಕಾಣಲಿಲ್ಲ. ಇಂತಹ ಆರ್ಥಿಕ ವ್ಯವಸ್ಥೆ ಬಗ್ಗೆ ನಾನು ಕೇಳಿಯೂ ಇರಲಿಲ್ಲ' ಎಂದು ಹೇಳಿದರು. ಆ ಮಸ್‌ಜಿದ್ ಇಮಾಮ್ ಕೂಡಲೆ ತಮ್ಮ ಚಂದ ನೀಡಿದರು. ಅವರು ಹೀಗೆ ವಾಗ್ದಾನ ಮಾಡಿದರು: 'ಇನ್ನು ಮುಂದೆ ಈ ಜಮಾಅತಿನ ಎಲ್ಲರೂ ಪ್ರತಿ ತಿಂಗಳು ಚಂದ ಕೊಡುವೆವು'.

ಈ ಜನರು ಬಡ ಪ್ರದೇಶದವರಾಗಿದ್ದಾರೆ. ಅವರು ಕಡು ಬಡವರಾಗಿದ್ದಾರೆ. ಆದರೆ ತ್ಯಾಗದಲ್ಲಿ ಅತ್ಯಂತ ಉನ್ನತ ಪದವಿ ಪಡೆಯುವವರಾಗಿದ್ದಾರೆ. ಇದು ಕೇವಲ ಒಂದು ದೇಶಕ್ಕೆ ಸಂಬಂಧಿಸಿದ ಘಟನೆಯಲ್ಲ. ಲೋಕದ ಅನೇಕ ದೇಶಗಳಲ್ಲಿ ಇಂತಹ ಗಾಳಿ ಬೀಸುತ್ತಾ ಇದೆ. ಆಂಧ್ರ–ತೆಲಂಗಾನದ ಇನ್ಸ್‌ಪೆಕ್ಟರ್ ಶಹಾಬುದ್ದೀನ್ ಸಾಹೇಬ್ ಬರೆಯುತ್ತಾರೆ: ಹೈದರಾಬಾದಿನ ಒಬ್ಬ ಅಹ್ಮದಿ ಇಪ್ಪತ್ತು ಸಾವಿರ ಭಂಡವಾಳ ಹಾಕಿ ವ್ಯಾಪಾರ ಪ್ರಾರಂಭಿಸಿದ್ದರು. ಅವರು ಚಿಕ್ಕ ಒಂದು ಅಂಗಡಿ ನಡೆಸುತ್ತಾರೆ. ನಮಾಝ್ ವೇಳೆಯಲ್ಲಿ ಅಂಗಡಿ ಮುಚ್ಚುತ್ತಾರೆ. ವರ್ಷದಲ್ಲಿ ಒಂದು ತಿಂಗಳ ಪೂರ್ಣ ಆದಾಯ ತಹ್‌ರೀಕ್ ಜದೀದ್‌ಗೆ ಕೊಡುತ್ತಾರೆ. ಈ ವರ್ಷ ಅವರು ತಹ್‌ರೀಕ್ ಜದೀದ್ ಚಂದವಾಗಿ ಅರುವತ್ತು ಸಾವಿರ ರೂಪಾಯಿಗಳನ್ನು ಕೊಟ್ಟರು. ಅವರು ಬಾಡಿಗೆ ಮನೆಯಲ್ಲಿ

ವಾಸವಾಗಿದ್ದಾರೆ. ಇನ್ಸ್‌ಪೆಕ್ಟರ್ ಹೇಳುತ್ತಾರೆ: ನಾನು ಅವರೊಂದಿಗೆ ಸ್ವಂತ ಮನೆ ಖರೀದಿಸಲು ಹೇಳಿದೆ. ಆಗ ಅವರು ಹೇಳಿದರು: ಪರವಾಗಿಲ್ಲ, ಹೇಗೂ ಲೋಕ ನಾಶದ ಕಡೆಗೆ ಸಾಗುತ್ತಿದೆ. ಸಂಪತ್ತು ಸಂಗ್ರಹಿಸಿಡುವುದರ ಆವಶ್ಯಕತೆ ಏನಿದೆ. ನಾನು ಅಲ್ಲಾಹನ ಮಾರ್ಗದಲ್ಲಿ ಏಕೆ ಖರ್ಚು ಮಾಡಬಾರದು? ಎಂದು ಕೇಳಿದರು.

ಜರ್ಮನಿಯ ಸೆಕ್ರೆಟರಿ ತಹ್‌ರೀಕ್ ಜದೀದ್ ಬರೆಯುತ್ತಾರೆ: ಒಬ್ಬ ಮಹಿಳೆ ತಹ್‌ರೀಕ್ ಜದೀದ್ ಕಚೇರಿಗೆ ಬಂದರು. ಅವರು ತನ್ನ ಹೆಸರು ಹೇಳಲು ಇಚ್ಛಿಸಲಿಲ್ಲ. ಅವರು ತನ್ನ ಎಲ್ಲ ಆಭರಣಗಳನ್ನು ತಹ್‌ರೀಕ್ ಜದೀದ್‌ಗೆ ನೀಡಿದರು. ಆ ಆಭರಣ ಎಷ್ಟಿತ್ತೆಂದರೆ ಮೇಜು ಆಭರಣದಿಂದ ತುಂಬಿತು. ಬಂಗಾರದ ಸರಗಳು, ಉಂಗುರಗಳು, ಅನೇಕ ಬಳೆಗಳು, ಮತ್ತಿತರ ಆಭರಣಗಳಿದ್ದುವು. ಅವರು ಹೇಳಿದರು– ನನ್ನ ಹೆಸರು ಬಹಿರಂಗ ಪಡಿಸಬೇಡಿರಿ. ನನ್ನ ತ್ಯಾಗ ಕೇವಲ ಅಲ್ಲಾಹನಿಗೋಸ್ಕರವಾಗಲಿ ಎಂದು ಹೇಳಿದರು. ನೋಡಿರಿ, ಆಭರಣಗಳ ಅಭಿಲಾಷೆ ಮಹಿಳೆಯರ ಬಲಹೀನತೆಯಾಗಿದೆ. ಆದರೆ ಅಹ್ಮದಿ ಮಹಿಳೆಯರು ಈ ರೀತಿ ತ್ಯಾಗ ಮಾಡುತ್ತಾರೆ.

ರಶ್ಯ ದೇಶದ ಹಲವು ಘಟನೆಗಳು ಇವೆ. ಅವುಗಳಲ್ಲಿ ಒಂದು ಹೀಗಿದೆ. ಲೇನಾರ್ ಎಂಬ ಅಹ್ಮದಿ ಬರೆಯುತ್ತಾರೆ: ಅವರು ಆರ್ಥಿಕವಾಗಿ ಬಹಳ ಕಷ್ಟದಲ್ಲಿದ್ದರು. ಬಾಡಿಗೆಯ ಫ್ಲಾಟ್‌ನಲ್ಲಿ ವಾಸಿಸುತ್ತಿದ್ದರು. ಅವರು ಕಡ್ಡಾಯ ಚಂದ ಮತ್ತು ತಹ್‌ರೀಕ್ ಜದೀದ್ ಚಂದ ಕೊಡುತ್ತಿದ್ದರು. ಅವರು ಹೇಳುತ್ತಾರೆ: ಚಂದಗಳ ಅನುಗ್ರಹದಿಂದ ನನ್ನ ಪತ್ನಿ ಮೆಡಿಕಲ್ ವಿದ್ಯಾಭ್ಯಾಸ ಪೂರ್ಣಗೊಳಿಸಿದ ನಂತರ ಸರಕಾರಿ ಉದ್ಯೋಗ ಲಭಿಸಿತು. ಸರಕಾರ ಮಕ್ಕಳಿಗೆ ವಾಸಸ್ಥಳ ಪಡೆಯಲು ಸಾಲ ನೀಡಿತು. ಈಗ ಆರ್ಥಿಕ ಸ್ಥಿತಿ ಬಹಳ ಉತ್ತಮವಾಗಿದೆ. ಈಗ ಅಲ್ಲಾಹನ ಅನುಗ್ರಹದಿಂದ ನಮ್ಮ ಬಳಿ ಎರಡು ಕಾರುಗಳಿವೆ. ಇವೆಲ್ಲ ಅಲ್ಲಾಹನ ಅನುಗ್ರಹ ಮತ್ತು ಚಂದ ನೀಡಿದುದರ ಪರಿಣಾಮವಾಗಿದೆ. ನಾವು ಹಿಂದೆ ಬಹಳ ಕಷ್ಟದ ಕಾಲದಲ್ಲಿಯೂ ಚಂದ ಕೊಡುತ್ತಿದ್ದೆವು. ಈಗ ಅಲ್ಲಾಹನು ನಮಗೆ ಬಹಳ ಅನುಕೂಲತೆಗಳನ್ನು ದಯಪಾಲಿಸಿದ್ದಾನೆ.

ಈ ರೀತಿ ರಶ್ಯದ ಒಬ್ಬನಿಗೆ ಅಲ್ಲಾಹನು ಅನುಗ್ರಹ ನೀಡುತ್ತಾನೆ. ಆಫ್ರಿಕದವರಿಗೂ ಅನುಗ್ರಹ ನೀಡುತ್ತಿದ್ದಾನೆ. ಇಂಡೋನೇಶಿಯಾದವರಿಗೂ ಅನುಗ್ರಹ ನೀಡುತ್ತಿದ್ದಾನೆ. ಇತರ ದೇಶಗಳ ಜನರಿಗೂ ಯುರೋಪಿನ ಜನರಿಗೂ ಅಲ್ಲಾಹನು ಅನುಗ್ರಹ ನೀಡುತ್ತಿದ್ದಾನೆ. ಅಲ್ಲಾಹನ ಈ ವರ್ತನೆ ಸಾಬೀತು ಗೊಳಿಸುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರನ್ನು ಪ್ರೀತಿಸುವವರ ಒಂದು ಜಮಾಅತನ್ನು ನೀಡುವನೆಂದೂ ಅವರ ವಿಶ್ವಾಸದಲ್ಲಿ ವರ್ಧನೆ ಉಂಟುಮಾಡುವೆನೆಂದೂ ಅಲ್ಲಾಹನು ನೀಡಿದ ವಾಗ್ದಾನ ಈಡೇರುತ್ತಾ ಇದೆ ಎಂದು ಸಾಬೀತಾಗುತ್ತದೆ.

ಆರ್ಥಿಕ ತ್ಯಾಗಗಳ ಮತ್ತು ಅಲ್ಲಾಹನು ಅನುಗ್ರಹ ನೀಡಿದ ಅಸಂಖ್ಯಾತ ಘಟನೆಗಳಿವೆ. ನಾನು ಕೆಲವು ಘಟನೆಗಳನ್ನು ನಿಮ್ಮ ಮುಂದೆ ಇರಿಸಿದೆ. ಅಂದಾಜು ಎಲ್ಲ ದೇಶಗಳ ಜನರೊಂದಿಗೆ ಅಲ್ಲಾಹನ ವರ್ತನೆ ಹೀಗೆಯೇ ಆಗಿದೆ. ಅಲ್ಲಾಹನ ಮೇಲೆ ಭರವಸೆ ಇರಿಸಿ ಅವನಿಗೋಸ್ಕರ ತ್ಯಾಗ ಮಾಡುವವರಿಗೆ ಅಲ್ಲಾಹನು ಅಪ್ರತಿಮವಾಗಿ ಅನುಗ್ರಹ ನೀಡುತ್ತಾನೆ. ಅಹ್ಮದಿಯ್ಯತ್ ಸತ್ಯ ಎಂಬುದಕ್ಕೆ ಈ ಸಾಕ್ಷ್ಯ ಬುದ್ಧಿಶಾಲಿಗಳಿಗೆ ಸಾಕಾಗುವಷ್ಟಿದೆ– ತ್ಯಾಗಗಳ ಪರಿಣಾಮವಾಗಿ ತ್ಯಾಗ ಮಾಡಿದ ಜನರಿಗೆ ಅಲ್ಲಾಹನು ಅನುಗ್ರಹ ನೀಡುತ್ತಿದ್ದಾನೆ ಎಂಬುದು. ಏಕೆಂದರೆ ಅವರ ಚಂದ ಅಲ್ಲಾಹನ ಧರ್ಮದ ಪ್ರಚಾರಕ್ಕೋಸ್ಕರ ವಿನಿಯೋಗಿಸಲ್ಪಡುತ್ತದೆ. ಬಡದೇಶಗಳ ಜನರು ನಿಸ್ಸಂಶಯವಾಗಿಯೂ ಚಂದ ನೀಡುತ್ತಿದ್ದಾರೆ. ಆದರೆ ಅವರು ನೀಡುವ ಚಂದಕ್ಕಿಂತ ಅವರ ದೇಶದಲ್ಲಿ ಜಮಾಅತ್ ಮಾಡುವ ಖರ್ಚು ಬಹಳ ಹೆಚ್ಚಾಗಿದೆ. ಆದುದರಿಂದ ನಮ್ಮ ಕೇಂದ್ರವು ಶ್ರೀಮಂತ ದೇಶಗಳಲ್ಲಿ ಸಂಗ್ರಹಿಸುವ ಚಂದವನ್ನು ಆ ದೇಶಗಳಲ್ಲಿ ಖರ್ಚು ಮಾಡುತ್ತಿದೆ. ನೂರಾರು ಶಾಲೆಗಳು, ಡಜನ್ ಗಟ್ಟಲೆ ಆಸ್ಪತ್ರೆಗಳು, ಮಿಶನ್ ಹೌಸ್‌ಗಳು, ನೂರಾರು ಮಸ್‌ಜಿದ್‌ಗಳು ಪ್ರತಿವರ್ಷ ನಿರ್ಮಿಸಲ್ಪಡುತ್ತವೆ. ಅವುಗಳ ನಿರ್ಮಾಣಕ್ಕೆ ಹಣದ ಆವಶ್ಯಕತೆಯಿದೆ. ಅದನ್ನು ತಹ್‌ರೀಕ್ ಜದೀದ್ ಮತ್ತು ವಕ್ಫೇ ಜದೀದ್ ಚಂದಗಳ ಮೂಲಕ ಒದಗಿಸಲಾಗುತ್ತಿದೆ. ಇದಲ್ಲದೆ ಎಂ.ಟಿ.ಎ. ಚಲಾಯಿಸಲು ಅನೇಕ ಮಿಲಿಯನ್ ಡಾಲರ್ ಖರ್ಚಾಗುತ್ತಿದೆ. ಎಂ.ಟಿ.ಎ. ಬಗ್ಗೆ ನಾನು ಹೇಳಲು ಬಯಸುವುದೇನೆಂದರೆ, ಪರಿಶೋಧಿಸಿದಾಗ ತಿಳಿದುದೇನೆಂದರೆ ಇಲ್ಲಿ ಎಂ.ಟಿ.ಎ. ಎಷ್ಟರ ಮಟ್ಟಿಗೆ ಜನರು ಆಲಿಸಬೇಕಾಗಿದೆಯೋ ಅಷ್ಟು ಆಲಿಸಲ್ಪಡುವುದಿಲ್ಲ ಎಂಬುದು. ನನ್ನ ಖುತ್‌ಬ ನೇರವಾಗಿ ಆಲಿಸುವುದಿಲ್ಲ. ಜಮಾಅತ್ ಅಸಂಖ್ಯಾತ ಹಣ ಖರ್ಚು ಮಾಡುತ್ತಿದೆ. ಇದು ಜಮಾಅತಿನ ತರಬೇತಿಗೋಸ್ಕರ ಇರುವುದಾಗಿದೆ. ಸಮಯದ ವ್ಯತ್ಯಾಸವಿರುವುದು ನಿಜವಾದರೂ ರಿಪೀಟ್ (ಪುನರಾವರ್ತನೆ) ಆಗುವಾಗ ಖುತ್‌ಬ ಆಲಿಸಬೇಕು. ಖಿಲಾಫತ್‌ನೊಂದಿಗೆ ಜಮಾಅತಿನ ಸಂಬಂಧ ಜೋಡಿಸಲು ಅಲ್ಲಾಹನು ಮಾಡಿದ ಒಂದು ವ್ಯವಸ್ಥೆ ಎಂ.ಟಿ.ಎ. ಆಗಿವೆ. ನೀವು ಮನೆಗಳಲ್ಲಿ ಅದರ ಕಡೆಗೆ ಗಮನ ಹರಿಸದಿದ್ದರೆ ನಿಮ್ಮ ಮಕ್ಕಳು ಮೆಲ್ಲಮೆಲ್ಲಗೆ ಹಿಂದೆ ಸರಿಯಲು ಪ್ರಾರಂಭಿಸುವರು. ಆದುದರಿಂದ ನೀವು ಪಶ್ಚಾತ್ತಾಪ ಪಡಬೇಕಾದ ಕಾಲ ಬರುವ ಮೊದಲು ನೀವು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿರಿ. ಅದಕ್ಕಿರುವ ಅತ್ಯುತ್ತಮ ಮಾರ್ಗವಾಗಿ ಅಲ್ಲಾಹನು ಎಂ.ಟಿ.ಎ. ನಮಗೆ ನೀಡಿದ್ದಾನೆ. ನೀವು ಅದನ್ನು ಉಪಯೋಗಿಸಿರಿ. ಕನಿಷ್ಠಪಕ್ಷ ನನ್ನ ಖುತ್‌ಬಗಳನ್ನು ಆವಶ್ಯಕವಾಗಿ ಆಲಿಸಿರಿ. ಮುರಬ್ಬಿ ನಮಗೆ ಖುತ್‌ಬದ ಸಾರಾಂಶ ಓದಿ ಹೇಳುತ್ತಾರೆ, ನಮಗೆ ಅದು ಸಾಕು ಎಂದು ಹೇಳಬೇಡಿರಿ. ಸಾರಾಂಶ ಆಲಿಸುವುದು ಮತ್ತು ಪೂರ್ಣ ಖುತ್‌ಬ ಆಲಿಸುವುದರಲ್ಲಿ ಬಹಳ ವ್ಯತ್ಯಾಸವಿದೆ.

1934ರಲ್ಲಿ ಅಹ್‌ರಾರ್ ಎಂಬ ಸಂಘಟನೆ ಅಹ್ಮದಿಯಾ ಜಮಾಅತನ್ನು ನಾಶಗೊಳಿಸುವ ಮತ್ತು ಖಾದಿಯಾನನ್ನು ಧ್ವಂಸಗೊಳಿಸುವ ಮಾತುಗಳನ್ನು ಹೇಳುತ್ತಾ ಇತ್ತು. ಆಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದನ್ನು ಪ್ರಕಟಿಸಿ ವಿದೇಶಗಳಿಗೆ ಮುಬಲ್ಲಿಗರನ್ನು ಕಳುಹಿಸುವ ಯೋಜನೆ ರೂಪಿಸಿದರು. ತಬ್ಲೀಗ್ ಮಾಡುವ ಒಂದು ಸಮಗ್ರ ಯೋಜನೆ ರೂಪಿಸಿದರು. ಈಗ ಅಲ್ಲಾಹನ ಅನುಗ್ರಹದಿಂದ ಲೋಕದ ಪ್ರತಿಯೊಂದು ದೇಶದಲ್ಲಿ ಅಹ್ಮದಿಯಾ ಜಮಾಅತ್ ಪರಿಚಯಿಸಲ್ಪಟ್ಟಿದೆ. 209 ದೇಶಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿದೆ. ಈಗ ಜಮಾಅತ್ ಅಹ್ಮದಿಯಾದ ಮೇಲೆ ಸೂರ್ಯನು ಅಸ್ತಮಿಸುವುದಿಲ್ಲ.

ಅಹ್‌ರಾರ್ ಜನರು ಖಾದಿಯಾನ್‌ನಿಂದ ಅಹ್ಮದಿಯಾ ಜಮಾಅತ್ ನಾಶಮಾಡುವ ಮಾತು ಆಡುತ್ತಿದ್ದರು. ಈಗ ನೋಡಿರಿ ಲೋಕದ ಈ ಪಶ್ಚಿಮದ ಮೂಲೆಯಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶವನ್ನು ಅವರ ಒಬ್ಬ ಗುಲಾಮನಾದವನು ಲೋಕಕ್ಕೆ ತಲಪಿಸುತ್ತಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನ ಬಹಳ ವೈಭವಶಾಲಿಯಾಗಿ ಈಡೇರುತ್ತಿದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ ಈ ವಿಷಯಗಳು ಅವರ ಮೇಲೆ ಹೊಣೆಗಾರಿಕೆಗಳನ್ನು ಹೊರಿಸುತ್ತಿದೆ. ಈ ಹೊಣೆಗಾರಿಕೆಗಳನ್ನು ಈಡೇರಿಸುವುದು ನಿಮ್ಮೆಲ್ಲರ ಕಡ್ಡಾಯ ಕರ್ತವ್ಯವಾಗಿದೆ. ಅಲ್ಲಾಹನು ನಿಮಗೆ ಹಾಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

ಈಗ ನಾನು ತಹ್‌ರೀಕ್ ಜದೀದಿನ ಹೊಸ ವರ್ಷದ ಪ್ರಕಟಣೆ ನೀಡುತ್ತಿದ್ದೇನೆ. ವಾಡಿಕೆಯಂತೆ ಕೆಲವು ಮಾಹಿತಿಗಳನ್ನು ಸಹ ನೀಡುತ್ತೇನೆ. ಈ ವರ್ಷ, ಈ ಅಕ್ಟೋಬರ್ ದಿನಾಂಕ 31ರಂದು ಮುಕ್ತಾಯವಾದ ವರ್ಷ, ತಹ್‌ರೀಕ್ ಜದೀದಿನ 82ನೇ ವರ್ಷವಾಗಿತ್ತು. ನವೆಂಬರ್ ಒಂದರಿಂದ 83ನೇ ವರ್ಷ ಆರಂಭವಾಗಿದೆ. ಈ ಕಳೆದ ವರ್ಷ ಅಲ್ಲಾಹನ ಅನುಗ್ರಹದಿಂದ ತಹ್‌ರೀಕ್ ಜದೀದ್ ಚಂದವಾಗಿ ಒಟ್ಟು ಒಂದು ಕೋಟಿ ಒಂಬತ್ತು ಲಕ್ಷ ಮೂವತ್ತಮೂರು ಸಾವಿರ ಪೌಂಡ್ ಸ್ಟರ್‌ಲಿಂಗ್ ಲಭಿಸಿದೆ – ಅಲ್‌ಹಮ್ದುಲಿಲ್ಲಾಹ್. ಎಂದಿನಂತೆ ಪಾಕಿಸ್ಥಾನ ಮೊದಲನೆ ಸ್ಥಾನದಲ್ಲಿದೆ. ಅದನ್ನು ಬಿಟ್ಟು ಉಳಿದ ದೇಶಗಳಲ್ಲಿ ಜರ್ಮನಿ ಪ್ರಥಮ ಸ್ಥಾನದಲ್ಲಿದೆ. ಬ್ರಿಟನ್ ಎರಡನೆಯ ಸ್ಥಾನದಲ್ಲಿ, ಅಮೇರಿಕ ಮೂರನೆಯ ಸ್ಥಾನ, ಕೆನಡ ನಾಲ್ಕನೆಯ ಸ್ಥಾನದಲ್ಲಿದೆ, ಭಾರತ ಐದನೆ ಸ್ಥಾನ, ಆಸ್ಟ್ರೇಲಿಯಾ ಆರನೆ ಸ್ಥಾನ, ಮಧ್ಯಪೂರ್ವದ ಒಂದು ದೇಶ ಏಳನೆಯ ಸ್ಥಾನದಲ್ಲಿದೆ, ಇಂಡೋನೇಶಿಯಾ ಎಂಟನೆ ಸ್ಥಾನದಲ್ಲಿದೆ, ಮಧ್ಯಪೂರ್ವದ ಇನ್ನೊಂದು ದೇಶ ಒಂಬತ್ತನೆಯ ಸ್ಥಾನದಲ್ಲಿದೆ, ಘಾನ ಹತ್ತನೆ ಸ್ಥಾನದಲ್ಲಿದೆ, ಸ್ವಿಝರ್‌ಲೇಂಡ್ ಹನ್ನೊಂದನೆ ಸ್ಥಾನದಲ್ಲಿದೆ. ವೈಯ್ಯಕ್ತಿಕ ಚಂದದಲ್ಲಿ ಸ್ವಿಝರ್‌ಲೇಂಡ್ ಬಹಳ ಮುಂದಿದೆ. ಆದುದರಿಂದ ಅದರ ಹೆಸರನ್ನು ಸಹ ಬರೆದಿರುವೆನು.

ಆಫ್ರಿಕನ್ ದೇಶಗಳಲ್ಲಿ ಮೌರಿಷಸ್ ಪ್ರಥಮ ಸ್ಥಾನದಲ್ಲಿದೆ. ಅನಂತರ ಘಾನ, ನೈಜೀರಿಯಾ, ಗ್ಯಾಂಬಿಯಾ, ಸೌತ್ ಆಫ್ರಿಕ, ಬುರ್ಕಿನೋ ಫಾಸೋ, ಕೆಮರೂನ್, ಸಿಯರ್ರಾ ಲಿಯೋನ್, ಲೈಬೀರಿಯಾ, ತಾನ್‌ಝಾನಿಯಾ ಹಾಗೂ ಮಾಲಿ ಅನುಕ್ರಮವಾಗಿ ಸ್ಥಾನಗಳನ್ನು ಪಡೆದಿವೆ.

ಈ ವರ್ಷ ತೊಂಬತ್ತು ಸಾವಿರ ಜನರು ಹೊಸದಾಗಿ ಚಂದ ಕೊಡುವವರಾಗಿದ್ದಾರೆ. ಒಟ್ಟು ಹದಿನಾಲ್ಕು ಲಕ್ಷ ನಾಲ್ಕು ಸಾವಿರಕ್ಕಿಂತ ಹೆಚ್ಚು ಜನರು ಇದರಲ್ಲಿ ಸೇರಿದ್ದಾರೆ.

ಭಾರತದ ಹತ್ತು ಜಮಾಅತ್‌ಗಳು ಅನುಕ್ರಮವಾಗಿ ಹೀಗೆ ಇವೆ: ಕರುಳಾಯಿ (ಕೇರಳ), ಕೋಝಿಕ್ಕೋಡ್ (ಕೇರಳ), ಹೈದರಾಬಾದ್ (ತೆಲಂಗಾನ), ಪತ್ತಪಿರಿಯಂ (ಕೇರಳ), ಖಾದಿಯಾನ್, ಕಣ್ಣೂರ್ ಟೌನ್ (ಕೇರಳ), ಪಯಂಗಾಡಿ (ಕೇರಳ), ದೆಹಲಿ, ಕಲ್ಕತ್ತ ಹಾಗೂ ಸಲೂರ್ (ತಮಿಳುನಾಡು).

ಭಾರತದ ಹತ್ತು ರಾಜ್ಯಗಳಲ್ಲಿ ಪ್ರಥಮ ಸ್ಥಾನ ಕೇರಳಕ್ಕೆ, ಅನಂತರ ಅನುಕ್ರಮವಾಗಿ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು, ಜಮ್ಮು ಕಾಶ್ಮೀರ, ಒಡಿಶ, ಪಂಜಾಬ್, ಬಂಗಾಳ, ದೆಹಲಿ, ಮಹಾರಾಷ್ಟ್ರ.

ಭಾರತದಲ್ಲಿ ತಹ್‌ರೀಕ್ ಜದೀದ್ ಚಂದ ಹಿಂದೆ ಬಹಳ ಕಡಿಮೆ ಇತ್ತು. ಈಗ ತುಂಬಾ ಮುಂದೆ ಸಾಗುತ್ತಿದೆ. ಅಲ್ಲಾಹನು ಇದರಲ್ಲಿ ಸೇರಿರುವ ಎಲ್ಲರಿಗೂ ಸಂಪತ್ತಿನಲ್ಲೂ ಜನರಲ್ಲೂ ಅಪರಿಮಿತ ಅನುಗ್ರಹ ದಯಪಾಲಿಸಲಿ. ಅವರ ತ್ಯಾಗಗಳನ್ನು ಅಂಗೀಕರಿಸಲಿ. ಇನ್ನು ಮುಂದೆ ಸಹ ಹೆಚ್ಚು ಹೆಚ್ಚಾಗಿ ತ್ಯಾಗ ಮಾಡಲು ಭಾಗ್ಯ ಅವರಿಗೆ ಸಿಗುವಂತಾಗಲಿ. ಖಿಲಾಫತ್‌ನೊಂದಿಗೆ ಅವರು ಬಲಿಷ್ಠವಾದ ಸಂಬಂಧ ಸ್ಥಾಪಿಸುವವರಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At, Bait-un-Noor Mosque, Calgary, Canada. U.S.A on 11-11-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon